ಈಗಾಗಲೇ ಅಘೋಷಿತ ಕೊಳಚೆ ಪ್ರದೇಶಗಳಲ್ಲಿ ಬಡತನ ರೇಖೆಯಿಂದ ಕೆಳಗೆ ವಾಸಿಸುತ್ತಿರುವವರಿಗೆ ಒಟ್ಟು 3,032 ಹಸಿರು ಕಾರ್ಡುಗಳನ್ನು ವಿತರಿಸಿದ್ದೇವೆ. ಅಲ್ಲದೆ, ಇತರೆ ಭಾಗಗಳಲ್ಲಿ ಬಡತನ ರೇಖೆಯಿಂದ ಕೆಳಗೆ ವಾಸಿಸುತ್ತಿರುವವರಿಗೂ ಹಸಿರು ಕಾರ್ಡುಗಳನ್ನು ವಿತರಿಸುವ ವ್ಯವಸ್ಥೆಯನ್ನು ವಿಸ್ತರಿಸುವ ಬಗ್ಗೆ ಏನು ಸಲಹೆಯನ್ನು ನಮ್ಮ ಮುಂದಿಟ್ಟಿದ್ದಾರೆ, ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಸಂಗಣ್ಣ ಕರಡಿ:- ಬಡ ಜನತೆಗೆ ಇದೊಂದು ಒಳ್ಳೆಯ ಯೋಜನೆಯಾಗಿರುವುದರಿಂದ, ಮಾನ್ಯ ಮಂತ್ರಿಗಳು ಮುಖ್ಯಮಂತ್ರಿಗಳ ಜೊತೆ ಈ ಕುರಿತು ಸಮಾಲೋಚಿಸಿ ಆದಷ್ಟು ತೀವ್ರಗತಿಯಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ನಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಬಸವಣ್ಣಪ್ಪ:- ಪರಿಶೀಲಿಸಲಾಗುವುದು.

ವಿಷಯ:- ಶಿಕಾರಿಪುರದಲ್ಲಿ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾವನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 192 (1291)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿಕಾರಿಪುರದಲ್ಲಿ ಹೊಸದಾಗಿ ಗ್ರಾಮಾಂತರ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಈ ಠಾಣೆಯನ್ನು ಯಾವಾಗ ತೆರೆಯಲಾಗುವುದು?

ಶ್ರೀ ಆರ್.ರೋಷನ್‌ಬೇಗ್ (ಗೃಹ ರಾಜ್ಯ ಸಚಿವರು):-

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಶಿಕಾರಿಪುರದಲ್ಲಿ ಹೊಸದಾಗಿ ಗ್ರಾಮಾಂತರ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾಪನೆ ಸರ್ಕಾರ ಮುಂದಿದೆಯೇ? ಎಂದು ಕೇಳಿರುವುದಕ್ಕೆ 'ಇಲ್ಲ'ವೆಂದು ಉತ್ತರಿಸಿದ್ದಾರೆ. ಶಿಕಾರಿಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 26 ಗ್ರಾಮ ಪಂಚಾಯಿತಿಗಳು ಹಾಗೂ 82 ಹಳ್ಳಿಗಳು ಬರಲಿದ್ದು, ಅದರಲ್ಲೂ ಹೋರಾಟಕ್ಕೆ ಹೆಸರುವಾಸಿಯಾದ ಈಸೂರು, ಕಪ್ಪನಹಳ್ಳಿ ಮುಂತಾದ ದೊಡ್ಡ ದೊಡ್ಡ ಗ್ರಾಮಗಳು ಬರುತ್ತವೆ. ಸದರಿ ಠಾಣೆಯ ವ್ಯಾಪ್ತಿ ಐದು ಕಿಲೋಮೀಟರ್‌ನಿಂದ ಇಪ್ಪತ್ತನಾಲ್ಕನೇ ಕಿಲೋಮೀಟರ್‌ವರೆಗೂ ಇದೆ. ಅಲ್ಲದೆ, ಜನಸಂಖ್ಯೆ ದೃಷ್ಟಿಯಿಂದಲೂ ದೊಡ್ಡದಾಗಿದೆ. ಇನ್ನು ಇಲ್ಲಿ ನಡೆದ ಅಪರಾಧಗಳ ಸಂಖ್ಯೆ ಹೇಳುವುದಾದರೆ, 1991ರಲ್ಲಿ 215, 1992ರಲ್ಲಿ 247, 1993ರಲ್ಲಿ 310, 1994ರಲ್ಲಿ 261

ಮತ್ತು 1995ರಲ್ಲಿ ಅರ್ಧ ವರ್ಷಕ್ಕೆ 233 ಮೊಕದ್ದಮೆಗಳು ದಾಖಲಾಗಿವೆ. ಈಗಿರುವಂಥ ಜನಸಂಖ್ಯೆಗೆ ಲೆಕ್ಕ ಹಾಕುವುದಾದರೆ ಈಗ ಠಾಣೆಯಲ್ಲಿರುವ ಪೇದೆಗಳ ಪೈಕಿ ಒಬ್ಬ ಪೇದೆ ಸುಮಾರು 3772 ಜನರನ್ನು ನಿಯಂತ್ರಿಸಬೇಕಾಗುತ್ತದೆ ಮತ್ತು ದಿನದಲ್ಲಿ 24 ಗಂಟೆಗಳ ಕಾಲ ಕೆಲಸ ಮಾಡಿದರೂ ಆಗುವುದಿಲ್ಲ. ಅಲ್ಲದೆ, ಸದರಿ ಠಾಣೆ ವ್ಯಾಪ್ತಿಯಲ್ಲಿ ಬರುವ 23 ಗ್ರಾಮಗಳನ್ನು 'ಸೂಕ್ಷ್ಮ'ವಾದುವೆಂದು ಈಗಾಗಲೇ ಗುರ್ತಿಸಿದ್ದಾರೆ. ಈ ಗ್ರಾಮಾಂತರ ಪೊಲೀಸ್ ಠಾಣೆಯನ್ನು ತೆರೆಯಬೇಕೆಂದು ಇಲಾಖೆಯವರು ಸಹ ವಿನಂತಿಸಿದ್ದಾರೆ. ಹೊಸದಾಗಿ ಪೊಲೀಸ್ ಠಾಣೆ ತೆರೆಯಲು ಹತ್ತು ವರ್ಷಗಳ ಹಿಂದೆ ನಾವು ಅಲ್ಲಿ ಜಾಗ ಕೊಟ್ಟಿದ್ದು, ಅದಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿದ್ದೀರಿ, ಆ ಸಂಬಂಧವಾಗಿ ಉಚ್ಚ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದಿದ್ದರೂ ಹತ್ತು ವರ್ಷಗಳಿಂದ ಆ ತಡೆಯಾಜ್ಞೆಯನ್ನು ತೆರವುಗೊಳಿಸುವ ಪ್ರಯತ್ನ ಮಾಡಿಲ್ಲ. ಇದೊಂದು ವಿಶೇಷವಾದ ತಾಲ್ಲೂಕು, ನಗರವಾಗಿರುವುದರಿಂದ ಇಲ್ಲಿ ಪೊಲೀಸ್ ಠಾಣೆ ತೆರೆಯುವುದರಿಂದ ಹೆಚ್ಚು ಅನುಕೂಲವಾಗುತ್ತದಾದ್ದರಿಂದ ಈಗಲಾದರೂ ಪರಿಗಣಿಸಿ ಹೊಸ ಪೊಲೀಸ್ ಠಾಣೆಯನ್ನು ಪ್ರಾರಂಭಿಸಬೇಕು.

ಶ್ರೀ ಆರ್.ರೋಷನ್ ಬೇಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಆದರೆ, 1991ರ ಜನಗಣತಿ ಪ್ರಕಾರ ಒಂದು ಹೊಸ ಪೊಲೀಸ್ ಠಾಣೆ ತೆರೆಯಬೇಕಾದರೆ ಅಲ್ಲಿ ಸುಮಾರು 44 ಸಾವಿರದಷ್ಟು ಜನಸಂಖ್ಯೆ ಇರಬೇಕು. ಇದರ ಜೊತೆಗೆ ಅಲ್ಲಿನ ತೊಗರ್ಸಿ ಶಿರಾಳಕೊಪ್ಪ ಪೊಲೀಸ್ ಠಾಣೆಗಳಿರುವ ಕಡೆ ಒಂದು ಔಟ್‌ಪೋಸ್ಟ್ ಕೊಡಿ ಎಂತಲೂ ಹೇಳಿದ್ದಾರೆ. ಮತ್ತು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಸಹ ಹೊಸೂರು ಗ್ರಾಮದ ಹತ್ತಿರ ಒಂದು ಔಟ್‌ಪೋಸ್ಟ್ ಪೋಲಿಸ್ ಠಾಣೆ ತೆರೆಯಬೇಕೆಂದು ಕೇಳಿದ್ದಾರೆ. ಆದರೆ, ಎರಡು ಔಟ್‌ಪೋಸ್ಟ್ ಪೊಲೀಸ್ ಠಾಣೆಗಳನ್ನು ತೆರೆಯವ ಬದಲು ಹೊಸದಾಗಿ ಒಂದು ಪೊಲೀಸ್ ಠಾಣೆಯನ್ನು ಏಕೆ ತೆರೆಯಬಾರದೆಂದು ನಾನು ಯೋಚಿಸುತ್ತಿದ್ದೇನೆ. ಏಕೆಂದರೆ, ಶಿವಮೊಗ್ಗ ಮುಖ್ಯಮಂತ್ರಿಯವರ ಸ್ವಂತ ಜಿಲ್ಲೆಯಾಗಿರುವುದಲ್ಲದೆ, ಅಲ್ಲಿರುವ ಶಿಕಾರಿಪುರ ನಮ್ಮ ವಿರೋಧ ಪಕ್ಷದ ನಾಯಕರ ಕ್ಷೇತ್ರವಾಗಿರುವುದರ ಜೊತೆಗೆ ಅದು 'ಸೂಕ್ಷ್ಮ ಪ್ರದೇಶ'ವಾಗಿರುವುದರಿಂದ ಶಿಕಾರಿಪುರದಲ್ಲಿ ಹೊಸದಾಗಿ ಗ್ರಾಮಾಂತರ ಪೊಲೀಸ್ ಠಾಣೆ ತೆರೆಯುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಹತ್ತು ವರ್ಷಗಳ ಹಿಂದೆ ಅಲ್ಲಿನ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಪೊಲೀಸ್ ಠಾಣೆ ತೆರೆಯಲು ನಿಮಗೆ ಕೊಟ್ಟಿದ್ದು, ಇವೊತ್ತು ಆ ಭೂಮಿ ಕೊಟ್ಯಾಂತರ ರೂಪಾಯಿಯಷ್ಟು ಬೆಲೆ ಬಾಳಬಹುದು. ಆದರೆ, ಈ ಕುರಿತು ಹತ್ತು ವರ್ಷಗಳಿಂದ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯಿರುವುದರಿಂದ, ತಡೆಯಾಜ್ಞೆಯನ್ನು ತೆರವುಗೊಳಿಸಲು ಸಾಧ್ಯವಾಗಿಲ್ಲ. ನಾಳೆ ಒಂದು ಇಂಚಿನಷ್ಟು ಸ್ಥಳ ಬೇಕಾದರೆ ಸಿಗದಿರುವ ಸ್ಥಳ ಅದಾಗಿರುವುದರಿಂದ ಆ ಬಗ್ಗೆ ತಂದಿರುವ

ತಡೆಯಾಜ್ಞೆಯನ್ನು ತೆರವುಗೊಳಿಸಿ ಜಾಗವನ್ನು ಪೊಲೀಸ್ ಠಾಣೆಗೆ ಉಪಯೋಗಿಸಿಕೊಳ್ಳುವುದಕ್ಕೆ ಈಗಲಾದರೂ ಪ್ರಯತ್ನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ರೋಷನ್ ಬೇಗ್:- ಆ ಕುರಿತು ಪ್ರಯತ್ನಿಸುತ್ತೇವೆ.

ವಿಷಯ:- ಹುಣಸೂರಿನ ಸಣ್ಣ ನೀರಾವರಿ ಕಾರ್ಯಾಲಯ ಸ್ಥಳಾಂತರದಿಂದ ಉದ್ಭವಿಸಿದ ಸ್ಥಿತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 194 (1139)

ಶ್ರೀ ಸಿ.ಹೆಚ್.ವಿಜಯಶಂಕರ್ (ಹುಣಸೂರು):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಣಸೂರಿನಲ್ಲಿರುವ ಸಣ್ಣ ನೀರಾವರಿ ಕಾರ್ಯಾಲಯವನ್ನು ಪಕ್ಕದ ಕ್ಷೇತ್ರವಾದ ಹೆಚ್.ಡಿ.ಕೋಟೆಗೆ ಸ್ಥಳಾಂತರಗೊಳಿಸಲು ಸರ್ಕಾರದವರ ಗಮನದಲ್ಲಿರುವುದು ನಿಜವೇ?

ಆ) ಸದರಿ ತೀರ್ಮಾನದಿಂದ ಪರಿಶೀಲನೆಯ ನಲವತ್ತು ಸಾವಿರ ಎಕರೆ ಸಣ್ಣ ನೀರಾವರಿ ಅಚ್ಚುಕಟ್ಟು ಪ್ರದೇಶವನ್ನು ಹೊಂದಿದ ಹುಣಸೂರು ಕ್ಷೇತ್ರದಿಂದ ಕೇವಲ ಮೂರು ಸಾವಿರ ಎಕರೆ ಸಣ್ಣ ನೀರಾವರಿ ಅಚ್ಚುಕಟ್ಟು ಪ್ರದೇಶ ಹೊಂದಿದ ಹೆಚ್.ಡಿ.ಕೋಟೆಗೆ ಕಾರ್ಯಾಲಯ ವರ್ಗಾಯಿಸುವುದರಿಂದ ಹುಣಸೂರು ಕ್ಷೇತ್ರದ ಆಡಳಿತ ಮತ್ತು ಉಸ್ತುವಾರಿ ಹದಗೆಟ್ಟು ರೈತರು ವಿಶೇಷ ತೊಂದರೆಗೆ ಒಳಗಾಗುವುದು ನಿಜವೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಈ ವಿಷಯದಲ್ಲಿ ಕೈಗೊಳ್ಳುವ ಕ್ರಮಗಳೇನು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಹುಣಸೂರಿನಲ್ಲಿ ಸಣ್ಣ ನೀರಾವರಿ ಉಪವಿಭಾಗ ಇರುವುದಿಲ್ಲ. ಲೋಕೋಪಯೋಗಿ ಇಲಾಖೆಯು ತನ್ನ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 50 ಪಿಸಿಒ 93 ದಿನಾಂಕ 23-5-96ರಲ್ಲಿ ಹೆಚ್.ಡಿ.ಕೋಟೆ ಉಪವಿಭಾಗವನ್ನಾಗಿ ಪರಿವರ್ತಿಸಿದ ನಂತರ, ಈ ಉಪವಿಭಾಗವನ್ನು ಅದೇ ಸ್ಥಳದಲ್ಲೇ ಅಂದರೆ ಹೆಚ್.ಡಿ.ಕೋಟೆಯಲ್ಲಿಯೇ ಮುಂದುವರೆಸಲು ಆದೇಶ ಸಂಖ್ಯೆ: ನೀಇ 59 ಸನೀರಾ 95 ದಿನಾಂಕ: 29-5-96ರಂದು ನೀರಾವರಿ ಇಲಾಖೆಯು ಆದೇಶ ಹೊರಡಿಸಿದೆ. ಆದರೆ ನಂತರ ಲೋಕೋಪಯೋಗಿ ಇಲಾಖೆಯು ತನ್ನ ದಿನಾಂ : 23.5.96ರ ಆದೇಶವನ್ನು ತಡೆ ಹಿಡಿದಿದೆ. ಹೆಚ್.ಡಿ.ಕೋಟೆ ಉಪವಿಭಾಗಕ್ಕೆ ಹೆಚ್.ಡಿ.ಕೋಟೆ ತಾಲ್ಲೂಕಿನ ಮತ್ತು ಹುಣಸೂರು ತಾಲ್ಲೂಕಿನ ಎಲ್ಲಾ ಸಣ್ಣ ನೀರಾವರಿ ಕಾಮಗಾರಿಗಳ ಅನುಷ್ಠಾನ ಮತ್ತು ನಿರ್ವಹಣೆ ಕೆಲಸಗಳನ್ನು ವಹಿಸಲು ಆದೇಶಿಸಲಾಗಿದೆ.